# ಇಮ್ರಾನ್‌ರ ಹೊಸ ರುಚಿ!



ರುಚಿಕಟ್ಟಾದ ಅಡುಗೆ ರೂಪುಗೊಳ್ಳಲು ಉಪ್ಪು ಹುಳಿ ಖಾರದ ಹದವಾದ ಮಿಶ್ರಣ ಅತ್ಯಗತ್ಯ. ಒಳ್ಳೆಯ ಚಿತ್ರವೊಂದು ರೂಪುಗೊಳ್ಳಲು ಕೂಡ ಈ ಮೂರು ವಿಶೇಷಣಗಳೇ ಬೇಕು. ಈ ಸ್ವಾದಗಳನ್ನೇ ಶೀರ್ಷಿಕೆಯಾಗುಳ್ಳ ಚಿತ್ರ 'ಉಪ್ಪು ಹುಳಿ ಕಾರ'.

ಚಿತ್ರಮಂದಿರಗಳ ಬಾಗಿಲು ತಟ್ಟುತ್ತಿರುವ ಈ ಸಿನಿಮಾದ ನಿರ್ದೇಶನ ಇರ್ಮಾನ್ ಸರ್ದಾರಿಯಾ ಅವರದು. ಸ್ಟೈಲಿಶ್ ನೃತ್ಯ ಸಂಯೋಜನೆಗೆ ಇಮ್ರಾನ್ ಹೆಸರುವಾಸಿ. ಅವರ ಸಿನಿಮಾ ಕೂಡ ಸಾಕಷ್ಟು ಸ್ಟೈಲಿಶ್ ಆಗಿದೆಯಂತೆ. ಅನುಭವಿಗಳ ಜೊತೆಗೆ ಯುವ ಪ್ರತಿಭೆಗಳು ಈ ಚಿತ್ರದ ತಾರಾಗಣದಲ್ಲಿದ್ದಾರೆ. ಶಶಿ, ಧನಂಜಯ್ ಮತ್ತು ಶರತ್ ಎಂಬ ಮೂವರು ಹುಡುಗರು ಚಿತ್ರದ ಶೀರ್ಷಿಕೆಯ ಮೂರು ಗುಣಗಳನ್ನು ಪ್ರತಿನಿಧಿಸಲಿದ್ದಾರೆ.

'ಉಪ್ಪು ಹುಳಿ ಖಾರ' ಒಂದು ರೊಮ್ಯಾಂಟಿಕ್ ಥ್ರಿಲ್ಲರ್ ಕಥೆಯ ಸಿನಿಮಾ. ಬ್ಯಾಂಕ್ ರಾಬರಿ ಕುರಿತ ತನಿಖೆಯ ಕಥನ ಪಡೆದುಕೊಳ್ಳುವ ಟ್ವಿಸ್ಟ್‌ಗಳು ಈ ತಲೆಮಾರಿನ ತರುಣ ತರುಣಿಯರ ಜೀವನಶೈಲಿಯನ್ನು ಹಿಡಿದಿಡುವ ರೂಪದಲ್ಲಿಯೂ ಕಾಣಿಸಿಕೊಂಡಿವೆಯಂತೆ. ಸಾಹಸ ದೃಶ್ಯಗಳ ಜೊತೆಗೆ ರಂಜನೀಯ ಅಂಶವೂ ಹದವಾಗಿ ಬೆರೆತಿರುವ ಈ ಸಿನಿಮಾ ಪ್ರೇಕ್ಷಕರಿಗೆ ಇಷ್ಟವಾಗಲಿದೆ ಎನ್ನುವ ನಂಬಿಕೆ ಇಮ್ರಾನ್ ಬಳಗದ್ದು. ಮಾಲಾಶ್ರೀ ಚಿತ್ರದಲ್ಲಿ ರಫ್ ಅಂಡ್ ಟಫ್ ಪಾತ್ರವೊಂದನ್ನು ನಿರ್ವಹಿಸಿದ್ದಾರೆ. ಜಯಶ್ರೀ ಹಾಗೂ ಅನುಶ್ರೀ ತಾರಾಗಣದಲ್ಲಿರುವ ಪ್ರಮುಖ ಕಲಾವಿದೆಯರು.

# ಗಾಂಧಿನಗರದಲ್ಲಿ 'ಶಿವಗಾಮಿ'



ರಾಜಮೌಳಿ ನಿರ್ದೇಶನದ 'ಬಾಹುಬಲಿ' ಚಿತ್ರದ ಪ್ರಮುಖ ಪಾತ್ರಗಳಲ್ಲಿ ರಾಜಮಾತೆ ಶಿವಗಾಮಿಯದೂ ಒಂದು. ರಮ್ಯಕೃಷ್ಣ ಅಭಿನಯದ ಈ ಪಾತ್ರ ತನ್ನ ಗಾಂಭೀರ್ಯ ಹಾಗೂ ರಾಜತಾಂತ್ರಿಕ ನೈಪುಣ್ಯದಿಂದಾಗಿ ಗಮನಸೆಳೆದಿತ್ತು. ಈ ಪಾತ್ರದ ಹೆಸರನ್ನೇ ಶೀರ್ಷಿಕೆಯಾಗುಳ್ಳ ಕನ್ನಡ ಚಿತ್ರವೊಂದು ಪ್ರೇಕ್ಷಕರ ಎದುರು ಬರುವ ತವಕದಲ್ಲಿದೆ.

ಮಧು ಮಿಣಕನಗುರ್ಕಿ ಚಿತ್ರದ ನಿರ್ದೇಶಕರು. ಕನ್ನಡ ಮತ್ತು ತೆಲುಗು ಚಿತ್ರರಂಗದಲ್ಲವರು ಸಹ ನಿರ್ದೇಶಕರಾಗಿ ಅನುಭವ ಗಳಿಸಿದ್ದಾರೆ. ಅವರ ನಿರ್ದೇಶನದ ಹಂಬಲಕ್ಕೆ ತೆಲುಗು ನಿರ್ಮಾಪಕ ಶ್ರೀಧರ್ ನೀರೆರೆದಿದ್ದಾರೆ. ಕನ್ನಡದಲ್ಲಿ ರೂಪುಗೊಳ್ಳುತ್ತಿರುವ 'ಶಿವಗಾಮಿ' ತೆಲುಗು, ತಮಿಳು, ಮಲಯಾಳಂಗೆ ಡಬ್ ಆಗಲಿದೆಯಂತೆ.

'ಶಿವಗಾಮಿ' ಒಂಬತ್ತನೇ ಶತಮಾನದ ರಾಣಿಯೊಬ್ಬಳ ಕಥೆಯಂತೆ. ದಿಟ್ಟ ಹೆಣ್ಣೊಬ್ಬಳ ಬದುಕಿನ ಏಳುಬೀಳಿನ ಕಥನವನ್ನು ಅದ್ದೂರಿಯಾಗಿ ಚಿತ್ರಿಸಿರುವುದಾಗಿ ಮಧು ಹೇಳಿಕೊಂಡಿದ್ದಾರೆ. ಶೂಟಿಂಗ್‌ಗಾಗಿ ಅರಮನೆಯ ದೊಡ್ಡ ಸೆಟ್ ರೂಪಿಸಲಾಗಿತ್ತಂತೆ. 'ಬಾಹುಬಲಿ' ಚಿತ್ರಕ್ಕೆ ಕಂಪ್ಯೂಟರ್ ಗ್ರಾಫಿಕ್ಸ್ ಮಾಡಿದ್ದ ತಂತ್ರಜ್ಞರನ್ನೇ ಮಧು ತಮ್ಮ ಚಿತ್ರಕ್ಕೂ ಕರೆ ತಂದಿದ್ದಾರೆ. ಇಷ್ಟು ಸಾಲದೆಂಬಂತೆ 'ಬಾಹುಬಲಿ'ಯ ರಾಜಮಾತೆ ರಮ್ಯಕೃಷ್ಣರನ್ನು ತಮ್ಮ ಚಿತ್ರಕ್ಕೂ ಕರೆ ತಂದಿದ್ದಾರೆ.

ಚಿತ್ರದ ಪೋಸ್ಟರ್‌ಗಳನ್ನು ನೋಡಿದರೆ, ಸಿನಿಮಾದ ಕಥೆ ಒಂಬತ್ತನೇ ಶತಮಾನದಿಂದ ವರ್ತಮಾನಕ್ಕೂ ಚಾಚಿಕೊಂಡಿರುವಂತಿದೆ. ಪ್ರವೀಣ್ ಹಾಗೂ ಪಾಯಲ್ 'ಶಿವಗಾಮಿ' ಚಿತ್ರದ ಯುವಜೋಡಿ. ರವಿಕಾಳೆ, ಅವಿನಾಶ್, ಮಧುಸೂದನ್ ಹಾಗೂ ರಮೇಶ್ ಪಂಡಿತ್ ತಾರಾಗಣದಲ್ಲಿರುವ ಪ್ರಮುಖರು. ವೀರ ಸಮರ್ಥ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

